ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಮಾರ್ಚ್ 17.

ಪಾಠ 11 ಸಾಲ: ಮಾರ್ಚ್ 10–16

# ಸಾಲ: ಪ್ರತಿದಿನದ ತೀರ್ಮಾನ

ಸಬ್ಬತ್ತಿನ ಮಧ್ಯಾಹ್ನ:

ಈ ವಾರದ ಪಾಠದ ಅಧ್ಯಯನಕ್ಕಾಗಿ: ಕೀರ್ತನೆ 37:21, ಮತ್ತಾಯ 4:3–10, ಮತ್ತಾಯ 6:33, ಧರ್ಮೋಪದೇಶಕಾಂಡ 28:12, ಜ್ಞಾನೋಕ್ತಿಗಳು 13:11, ಜ್ಞಾನೋಕ್ತಿಗಳು 21:5, 2 ಕೊರಿಂಥ 4:18.

**ಸ್ಮರಣವಾಕ್ಯ:'ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ. ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರೆತು ಬೇರೆ ಯಾವ ಸಾಲವೂ ನಿಮಗೆ ಇರಬಾರದು. ಮತ್ತೊಬ್ಬರನ್ನು ಪ್ರೀತಿಸುವವನು ಧರ್ಮ ಪ್ರಮಾಣವನ್ನೆಲ್ಲಾ ನೆರವೇರಿಸಿದ್ದಾನೆ. (ರೋಮ 13:7,8).**

ಕೆಲವೊಂದು ಸಮಯದಲ್ಲಿ ನಿಮಗೆ ಅದೃಷ್ಟವಿದ್ದರೆ ಸಾಲ ಕೊಡುವವರು ಸಿಗುತ್ತಾರೆ. ಅವನು ಅಥವಾ ಅವಳು ನಿಮಗೆ ಹಣಕಾಸಿನ ಬಿಕ್ಕಟ್ಟಿನಲ್ಲಿ ಸಹಾಯ ಮಾಡುವ ಒಳ್ಳೆಯ ಉದ್ದೇಶದಿಂದ ನಿಮಗೆ ಹಣ ನೀಡುತ್ತಾರೆ. ಆದರೆ ಎಲ್ಲಾ ಸಮಯಗಳಲ್ಲೂ ಕೂಡ ಜನರು ಹಣವನ್ನು ನಿಮಗೆ ಸಹಾಯ ಮಾಡುವ ಉದ್ದೇಶದಿಂದ ಕೊಡುವುದಿಲ್ಲ. ಅವರು ನಿಮಗೆ ನೀಡುವ ಹಣದ ಮೂಲಕ ಹೆಚ್ಚು ಸಂಪಾದಿಸಬೇಕು ಎನ್ನುವ ಉದ್ದೇಶದಿಂದ ನಿಮಗೆ ಅವರು ಹಣ ನೀಡುತ್ತಾರೆ.

ಸಾಲವನ್ನು ತಪ್ಪಿಸಲು ಏನು ಮಾಡಬೇಕೋ ಅದೆಲ್ಲವನ್ನೂ ಕೂಡ ನಾವು ಮಾಡಬೇಕು. ಆದರೆ ಕೆಲವು ಸಮಯದಲ್ಲಿ ಅಂದರೆ ಮನೆ ಮತ್ತು ವಾಹನ ಖರೀದಿ ಮಾಡಲು, ಸಭೆಯನ್ನು ಕಟ್ಟಲು ಅಥವಾ ವಿದ್ಯಾಭ್ಯಾಸವನ್ನು ಮುಂದುವರೆಸಲು ಹಣದ ಸಹಾಯ ಬೇಕಾಗುತ್ತದೆ. ಆದರೆ ಅದನ್ನು ಬಹಳ ಬುದ್ದಿವಂತಿಕೆಯಿಂದ ಮಾಡಬೇಕಾಗುತ್ತದೆ, ಸಾಲದಿಂದ ಎಷ್ಟು ಬೇಗ ಹೊರಗೆ ಬರಬಹುದೋ ಅಷ್ಟು

ಬೇಗ ಅದರಿಂದ ಮುಕ್ತವಾಗಬೇಕು.

ಅದರೂ ನಾವು ಜಾಗ್ರತೆಯಾಗಿರಬೇಕು. ದೇವರ ಮಕ್ಕಳಾಗಿ ನಾವು ಹಣವನ್ನು ಉಪಯೋಗಿಸುವುದರಲ್ಲಿ ಅಸೆಬುರುಕತನವನ್ನು ಮತ್ತು ಲೋಕದ ಆಸೆಯು ಅದರ ಸ್ವಭಾವವನ್ನು ಅಧಿನಪಡಿಸಿಕೊಳ್ಳದಂತೆ ನೋಡಿಕೊಳ್ಳಬೇಕು.ಈ ಗುಣಗಳು ನಮ್ಮಲ್ಲಿ ಆಳ್ವಿಕೆ ನಡೆಸುವಾಗ ರಕ್ಷಣೆ ಮತ್ತು ಕೃಪೆಯು ದೂರ ನಿಲ್ಲುತ್ತದೆ' **ಎಲೆನ್ ಜಿ ವೈಟ್ ಅರ್ಲಿ ರೈಟಿಂಗ್ ಪುಟ 267.**

ನಾವು ಕುಶಲತೆ ಮತ್ತು ತಲಾಂತುಗಳನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಸಾಲವನ್ನು ತಡೆಯಬಹುದು. ಈ ವಾರ ನಾವು ಸಾಲದ ಕುರಿತಾಗಿ ಸತ್ಯವೇದ ಏನು ಹೇಳುತ್ತದೆ ಎಂದು ಕಲಿಯೋಣ.

**ಪಾಠ 11 ಸಾಲ: ಪ್ರತಿದಿನದ ತೀರ್ಮಾನ ಮಾರ್ಚ್ 10–16**

**ಭಾನುವಾರ ಮಾರ್ಚ್ 11**

## ಸಾಲ ಪಡೆಯುವುದು ಮತ್ತು ಖರ್ಚು ಮಾಡುವುದು

ಪ್ರವಾದಿಗಳು ಮತ್ತು ಎಲಿಷನು ಯೋರ್ದಾನ್ ಹೊಳೆಯ ತೀರದಲ್ಲಿ ಮರಗಳನ್ನು ಕಡಿಯುತ್ತಿದ್ದಾಗ 'ಕೊಡಲಿಯು ಜಾರಿ ನೀರಿನೊಳಗೆ ಬಿದ್ದಿತು. ಓಹೋ, ನನ್ನ ದೇವರೇ, ಎಂದು ಒಬ್ಬ ಪ್ರವಾದಿಯು ಕೂಗಿದನು. ಯಾಕೆಂದರೆ ಅದು ಎರವಲು ತಂದಿತ್ತು.' (2 ಅರಸುಗಳು 6:5) 'ಎರವಲು' ಎಂದರೆ ಬೇರೆಯವರ ವಸ್ತುವನ್ನು ಅವರ ಅನುಮತಿಯಿಂದ ಉಪಯೋಗಿಸುವುದಾಗಿದೆ. ಈ ಅನುಮತಿಯು ಅಪಾಯ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತದೆ. ಸಾಲವಾಗಿ ಪಡೆದಿರುವ ಹಣವು ಸಾಲವಾಗಿ ಪಡೆದಿರುವ ವಸ್ತುವಿಗಿಂತ ವ್ಯತ್ಯಾಸವಾಗಿದೆ.

ಹಣವನ್ನು ಸಾಲ ಪಡೆಯುವ ಒಂದೇ ಒಂದು ಕಾರಣ ಎಂದರೆ ಅದನ್ನು ಖರ್ಚುಮಾದುವುದಕ್ಕಾಗಿ. ನಾವು ಸಾಲವನ್ನು ಹಿಂತಿರುಗಿಸಬಹುದು ಎಂದು ನಾವು ಆಲೋಚಿಸುತ್ತೇವೆ ಮತ್ತು ಇನ್ನೂ ಮುಂದೆ ಇಂತಹ ಪರಿಸ್ಥಿತಿ ಎದುರಾಗುವುದಿಲ್ಲ ಎಂದು ಭಾವಿಸುತ್ತೇವೆ. ಅದರೂ ಭವಿಷ್ಯ ನಮಗೆ ತಿಳಿದಿಲ್ಲ (ಪ್ರಸಂಗಿ 8:7); ಆದ್ದರಿಂದ ಹಣವನ್ನು ಸಾಲವಾಗಿ ಪಡೆಯುವುದು ಯಾವಾಗಲೂ ಕೂಡ ಅಪಾಯ.



ಸಾಲದ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?

ಕೀರ್ತನೆ 37:21 ______________________________

ಪ್ರಸಂಗಿ 5:5: ______________________________

ಧರ್ಮೋಪದೇಶಕಾಂಡ 28:44, 45 ______________________________

ಸಾಲ ತೆಗೆದುಕೊಂಡ ಮೇಲೆ ಅದನ್ನು ಬಹಳ ಬುದ್ಧಿವಂತಿಕೆಯಿಂದ ಉಪಯೋಗಿಸುತ್ತೇವೆ ಎಂದು ನಾವು ಯೋಚಿಸುತ್ತೆವೆ, ಆದರೆ ಸಾಲದ ಹಣವನ್ನು ಮತ್ತು ನಮ್ಮ ಇತರೆ ಹಣವನ್ನು ಅಗತ್ಯಕ್ಕಿಂತ ಹೆಚ್ಚಾಗಿ ಖರ್ಚು ಮಾಡುವುದು ಅನೇಕ ಸಮಸ್ಯೆಗಳಿಗೆ ದಾರಿಮಾಡಿಕೊಡುತ್ತದೆ. ನಾವು ಯಾವುದನ್ನು ಪಡೆಯಲು ಸಾಧ್ಯವಿಲ್ಲವೋ ಅದನ್ನು ಪಡೆಯಲು ಬಯಸುವುದು ಸಾಲಕ್ಕೆ ನಡೆಸುತ್ತದೆ. ಸಾಲ ಮಾಡಿ ಖರ್ಚು ಮಾಡುವುದು ಗ್ರಾಹಕ ಸಂಸ್ಕೃತಿಯ ಹೃದಯ ಬಡಿತವಾಗಿದೆ, ಇದು ಶ್ರೀಮಂತರು ಮತ್ತು ಬಡವರನ್ನು ಭಾದಿಸುತ್ತದೆ. ಶೋಧನೆಗೆ ಒಳಗಾದಾಗ ನಾವು ದೇವರ ಸಹಾಯವನ್ನು ಪಡೆಯಬೇಕು. (1 ಕೊರಿಂಥ 10:13), ಯಾಕೆಂದರೆ ಸಾಲ ಒಂದು ಶಾಪವಾಗಬಹುದು (ಧರ್ಮೋಪದೇಶಕಾಂಡ 28:43–45).

ಹಣವನ್ನು ಸಾಲವಾಗಿ ಪಡೆಯುವ ಕೆಟ್ಟ ಅಭ್ಯಾಸವನ್ನು ಮಾಡಿಕೊಳ್ಳಬೇಡಿರಿ. ಒಂದು ವೇಳೆ ನೀವು ಈಗಾಗಲೇ ಸಾಲದಲ್ಲಿ ಇದ್ದರೆ ಸಾಧ್ಯವಾದಷ್ಟು ಬೇಗನೆ ಅದನ್ನು ತೀರಿಸಿರಿ. ನಾವು ಬುದ್ದಿಯಿಂದ ಖರ್ಚು ಮಾಡಬೇಕು ನಾವು ಹಣದ ಯಜಮಾನರಾಗಬೇಕು ಅದಕ್ಕೆ ಬದಲಾಗಿ ಲೋಕದ ಹಣಕ್ಕೆ ನಾವು ದಾಸರಾಗಬಾರದು.

ಮತ್ತೆ ಕೆಲವು ಸಂದರ್ಭಗಳಲ್ಲಿ ನಾವು ಹಣವನ್ನು ಸಾಲವಾಗಿ ಪಡೆಯಬೇಕು. ಆದರೆ, ಅದನ್ನು ಎಚ್ಚರಿಕೆಯಿಂದ ಮತ್ತು ಸಾಧ್ಯವಾದಷ್ಟು ಬೇಗನೆ ಹಿಂತಿರುಗಿಸುವ ಉದ್ದೇಶದಲ್ಲಿ ಮಾಡಬೇಕು.

ಹೆಚ್ಚು ಸಾಲದಲ್ಲಿ ಸಿಲುಕಿರುವ ವ್ಯಕ್ತಿಗೆ ಇರುವ ಆತ್ಮೀಯಅಪಾಯಗಳು ಯಾವುವು?

**ಪಾಠ 11 ಸಾಲ: ಪ್ರತಿದಿನದ ತೀರ್ಮಾನ ಮಾರ್ಚ್ 10–16**

**ಸೋಮವಾರ ಮಾರ್ಚ್ 12**

## ಪಾರುಪತ್ಯಗಾರಿಕೆ ಮತ್ತು ಕ್ಷಣಿಕ ತೃಪ್ತಿ

‘ಆಗ ಯಾಕೋಬನು ಏಸಾವನಿಗೆ ರೊಟ್ಟಿಯನ್ನೂ ಅಲಸಂದಿ ಗುಗ್ಗರಿಯನ್ನೂ ಕೊಟ್ಟನು. ಏಸಾವನು ತಿಂದು ಕುಡಿದು ಎದ್ದು ಹೋದನು. ಹೀಗೆ ಅವನು ತನ್ನ ಚೊಚ್ಚಲುತನದ ಹಕ್ಕನ್ನು ತಾತ್ಸಾರ ಮಾಡಿದನು. (ಆದಿಕಾಂಡ 25:34) ಏಸಾವನು ಬೇಟೆಯಾಡುವ ಮನುಷ್ಯನಾಗಿದ್ದು ತನ್ನ ಕೊರಿಕೆಗಳನ್ನು ತೀರಿಸಿಕೊಳ್ಳುವವನಾಗಿದ್ದನು. ಅವನು ತನ್ನ ಸಹೋದರನ ಅಡಿಗೆಯನ್ನು ವಾಸನೆ ನೋಡಿದಾಗ, ಅವನಿಗೆ ಆ ಗುಗ್ಗರಿಯು ಬೇಕಾಯಿತು. ಅವನು ಹಸಿವೆಯಿಂದ ಸಾಯುವುದು ಸಾಧ್ಯವಿಲ್ಲದೆ ಹೋದರು ಕೂಡ ಅವನು ತನ್ನ ಆಲೋಚನೆಗಿಂತ ತನ್ನ ಕೋರಿಕೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟನು. ಮತ್ತು ತನ್ನ ಚೊಚ್ಚಲುತನವನ್ನು ಊಟಕ್ಕಾಗಿ ಮಾರಿದನು. ಅವನಿಗೆ ತನ್ನ ಚೊಚ್ಚಲುತನ ಬೇಕಾದಾಗ ಅದನ್ನು ‘ಕಣ್ಣಿರು ಸುರಿಸುತ್ತಾ ಬೇಡಿಕೊಂಡರೂ’ (ಇಬ್ರಿಯರಿಗೆ 12:17) ಅದು ಅವನಿಗೆ ಸಿಗಲಿಲ್ಲ.

ಇದಕ್ಕೆ ವಿರುದ್ಧವಾಗಿ ನಮಗೆ ಯೇಸುವಿನ ಉದಾಹರಣೆಯಿದೆ. 40 ದಿವಸಗಳ ಉಪವಾಸದ ನಂತರ ಸೈತಾನನು ಆತನನ್ನು ಮೂರು ಬಾರಿ ಶೋಧಿಸಿದನು. ಮತ್ತಾಯ 4:3–10). ಆದರೆ ಆ ಶೋಧನೆಗಳು ಯಾಕೆ ಮತ್ತು ಅವು ಹೇಗೆ ಬಂದವು ಎಂದು ನೋಡಿದನು. ಆತನು ಬಲಹೀನನಾಗಿದ್ದರೂ ಕೂಡ ಕ್ಷಣಿಕ ಸುಖಗಳು ಆತನ ಮೇಲೆ ಜಯಿಸಲು ಅವಕಾಶ ನೀಡಲಿಲ್ಲ. ಈ ರೀತಿ ಮಾಡುವುದರಿಂದ ಪಾಪದ ಮೇಲೆ ಆತನಿಗಿರುವ ಶಕ್ತಿಯನ್ನು ತೋರಿಸಿದನು. ಆತನು ತನ್ನ ಚೊಚ್ಚಲುತನವನ್ನು ಬಿಟ್ಟುಕೊಡಲಿಲ್ಲ. ಮತ್ತು ಆತನ ಜೊತೆಯಲ್ಲಿ ನಮ್ಮೆಲರನ್ನೂ ಕೂಡ ಪಾಲುದಾರರಾಗುವುದಕ್ಕೆ ಕರೆಯುತ್ತಾನೆ. (ರೋಮ 8:17, ತೀತನಗೆ 3:7) ಯೇಸುವು ಶೋಧನೆಗೆ ಒಳಗಾದಾಗ ಆತನು ತೋರಿಸಿದ ಮಾದರಿಯನ್ನು ಅನುಸರಿಸಿ ನಾವು ನಮ್ಮ ಚೊಚ್ಚಲುತನವನ್ನು ಕಾಪಾಡಿಕೊಳ್ಳುತ್ತೇವೆ. (1 ಕೊರಿಂಥ 10;13).

ಈ ಲೋಕವು ನಮಗೆ ಕೊಡುವ ಶ್ರೇಷ್ಠವಾದ ಸಂತೋಷವೆಂದರೆ ಈಗ ಮತ್ತು ಈ ಲೋಕದ ಮಟ್ಟಿಗೆ ಮಾತ್ರ, ಯಾಕೆಂದರೆ ಅದು ಮುಂದಿನ ಲೋಕದ ಮತ್ತು



ಅನಂತರದ ಸಂತೋಷವನ್ನು ನೀಡಲಾರದು. ನಮಗೋಸ್ಕರ ಜೀವಿಸುವುದು ದೇವರಿಗಾಗಿ ಜೀವಿಸುವುದರ ವಿರುದ್ಧವಾಗಿದೆ.

ವಿಶ್ವಾಸಿಗಳಿಗೂ ಕೂಡ ಕ್ಷಣಿಕ ಸುಖದ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ.? 2 ಸಮುವೇಲನು 11:2–4, ಆದಿಕಾಂಡ 3:6, ಫಿಲಿಪ್ಪಿಯವರಿಗೆ 3:19, 1 ಯೋಹಾನ 2:16, ರೋಮ 8:8.

________________________________________

________________________________________

ಕ್ಷಣಿಕ ಸುಖಕ್ಕಾಗಿ ತವಕ ಪಡುವುದು ನಿಯಂತ್ರಿಸಲಾಗದ ಮನಸ್ಸಿನ ಸ್ಥಿತಿಯನ್ನು ತಿಳಿಸುತ್ತದೆ. ಇದು ಧೀರ್ಘಕಾಲದ ಗುರಿಗಳನ್ನು ತುಳಿದುಹಾಕುವ ತಾಳ್ಮೆಯ ಶತ್ರುವಾಗಿದೆ ಮತ್ತು ಹೊಣೆಗಾರಿಕೆಯನ್ನು ಘಾಸಿಗೊಳಿಸುತ್ತದೆ. ಕ್ಷಣಿಕ ಸುಖವನ್ನು ತಿರಸ್ಕರಿಸುವುದು ಅಭ್ಯಾಸ ಮಾಡಿಕೊಂಡಿರುವ ನಿಯಮವಾಗಿದೆ. ಇದು ಜೀವನದ ಒತ್ತಡಗಳನ್ನು ಮತ್ತು ಸನ್ನಿವೇಶಗಳನ್ನು ನಿಭಾಯಿಸುವ ಕಲೆಯಾಗಿದೆ. ಅದರಲ್ಲೂ ಲೋಕವು ಶ್ರೇಷ್ಠವಾದ ವಸ್ತುಗಳನ್ನು ಕೊಡುತ್ತಿರುವಾಗ, ಅಂದರೆ ಹಣವನ್ನು ಸಾಲವಾಗಿ ನೀಡುತ್ತಿರುವಾಗ, ಕ್ಷಣಿಕ ಸುಖವನ್ನು, ಶೀಘ್ರ ಸಹಾಯ, ಅತೀ ಬೇಗ ಶ್ರೀಮಂತರಾಗುವ ಯೋಜನೆಗಳಿಗೆ ಅಭ್ಯಾಸ ಮಾಡಿಕೊಂಡಿರುವ ಲೋಕಕ್ಕೆ ಇದು ಬಹಳ ವಿಚಿತ್ರವಾಗಿ ಕಾಣುತ್ತದೆ. ಒಮ್ಮೆ ನಾವು ಕ್ಷಣಿಕ ಸುಖವನ್ನು ಅನುಭವಿಸಿದರೆ, ಮತ್ತೆ ಮತ್ತೆ ನಾವು ಅದನ್ನೇ ಬಯಸುತ್ತೇವೆ ಮತ್ತು ಅದು ಬೇಕು ಬೇಕು ಎನಿಸುತ್ತದೆ. .... ದೇವರ ಬಹುಮಾನಗಳ ಪಾರುಪತ್ಯಗಾರರಾದ ನಾವು ಇಂತಹ ಶೋಧನೆಗಳಿಗೆ ಬೀಳಬಾರದು.

**ಪಾಠ 11 ಸಾಲ: ಪ್ರತಿದಿನದ ತೀರ್ಮಾನ ಮಾರ್ಚ್ 10–16**

**ಮಂಗಳವಾರ ಮಾರ್ಚ್ 13**

## ನಿಮಗಿರುವುದರಲ್ಲಿ ಜೀವಿಸುವುದು

‘ಜ್ಞಾನಿಯ ನಿವಾಸದಲ್ಲಿ ಎಣ್ಣೆಯೂ ಶ್ರೇಷ್ಠ ಸಂಪತ್ತೂ ಇರುವವು. ಜ್ಞಾನ ಹೀನನೂ ಇದ್ದದ್ದನ್ನೆಲ್ಲಾ ನುಂಗಿಬಿಡುವನು’ (ಜ್ಞಾನೋಕ್ತಿಗಳು 21:20)ಈ ವಚನವು ಜವಾಬ್ದಾರಿಯುತವಾದ ಹಣಕಾಸಿನ ವ್ಯವಹಾರವನ್ನು ಐಶಾರಾಮಿ ಮತ್ತು ವ್ಯರ್ಥವಾದ

ನಿರ್ವಹಣೆಯ ಜೊತೆ ಹೋಲಿಸುತ್ತದೆ. ಅಜ್ಞಾನಿಗಳು ತಮಗಿರುವುದರಲ್ಲಿ ಜೀವಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದಿಲ್ಲ. ಅವರಿಗಿರುವ ಹಣವನ್ನು ದುರಾಶೆಯಿಂದ ಖರ್ಚು ಮಾಡುತ್ತಾರೆ. ಹಣಕಾಸಿನ ನಿರ್ವಹಣೆ ಅಥವಾ ಮಿತವ್ಯಯ ಹುಚ್ಚುತನ ಎಂದು ತಿಳಿಯುತ್ತಾರೆ. ನಾವು ಹಣವನ್ನು ಸಾಲವಾಗಿ ಪಡೆಯಬಹುದಾದ ಸಮಯ ಬಂದಾಗ ಮನೆಯನ್ನು ಕೊಂಡುಕೊಳ್ಳುವ ಸಮಯದಲ್ಲಿ, ಬಹಳ ಎಚ್ಚರಿಕೆಯಿಂದ ಸಾಲವನ್ನು ಪಡೆಯಬೇಕು ಮತ್ತು ನಮಗಿರುವುದರಲ್ಲಿ ಜೀವಿಸುವುದನ್ನು ಕಲಿಯಬೇಕು.

ಶ್ರೀಮಂತರು ತಮ್ಮ ಬಳಿಯಿರುವ ಶ್ರೀಮಂತಿಕೆ ತಕ್ಕ ಹಾಗೆ ಜೀವಿಸಬಹುದು. ಅವರ ಸಮಸ್ಯೆ ಎಂದರೆ ಅವರು ಯಾವಾಗಲೂ ಕೂಡ ತಮ್ಮ ಹಣದ ಕುರಿತಾಗಿ ಚಿಂತಿಸುತ್ತಾರೆ ಮತ್ತು ಅದನ್ನು ಹೇಗೆ ಕಾಪಾಡುವುದು ಎಂದು ಆಲೋಚಿಸುತ್ತಾರೆ. ಜನರ ಬಳಿ ಯಾವಾಗ ಸ್ವಲ್ಪ ಇರುತ್ತದೋ ಮತ್ತು ಒಂದು ಸಂಬಳದಿಂದ ಮತ್ತೊಂದು ಸಂಬಳಕ್ಕೆ ಜೀವನ ಮಾಡುತ್ತಾರೋ ಅವರು ಜೀವನದ ನಿರ್ವಹಣೆ ಕುರಿತಾಗಿ ಆಲೋಚಿಸುತ್ತಾರೆ, ಹೊರೆತು ಆಸ್ತಿಯ ಕುರಿತಾಗಿ ಆಲೋಚಿಸುವುದಿಲ್ಲ. ಅದರೂ ಕೂಡ ಸತ್ಯವೇದವು ನಮಗಿರುವುದರಲ್ಲಿ ಜೀವನ ಮಾಡುವುದನ್ನು ಕಲಿಸುತ್ತದೆ. ಪೌಲನು ನಾವು ಅತ್ಯಂತ ಸರಳತನದಲ್ಲಿ ಜೀವಿಸಬೇಕೆಂದು ಸಲಹೆ ನೀಡುತ್ತಾನೆ 'ನಮಗೆ ಅನ್ನ ವಸ್ತ್ರಗಳಿದ್ದರೆ ಸಾಕು' (1 ತಿಮೋಥಿ 6:8) ಇದರಲ್ಲಿ ಮನೆಯು ಸೇರಿದೆ. ಪೌಲನು ಶ್ರೀಮಂತಿಕೆಯ ಕುರಿತಾಗಿ ಚಿಂತಿಸುವುದಿಲ್ಲ 'ಯಾಕಂದರೆ ಆತನಿಗೆ ಕ್ರಿಸ್ತನಿಗಾಗಿ ಜೀವಿಸುವುದು ಸಾಕು' (ಫಿಲಿಪ್ಪಿಯವರಿಗೆ 1:21).

ಎಲ್ಲದಕ್ಕೂ ಮುನ್ನ ನಾವು ಯಾವ ನಿಯಮಗಳನ್ನು ಪಾಲಿಸಬೇಕು? ಮತ್ತಾಯ 6:33 ನಮ್ಮ ಜೀವನಗಳನ್ನು ಹೇಗೆ ಜೀವಿಸಬೇಕು ಎಂಬುದರ ಕುರಿತಾಗಿ ನಾವು ಯಾವ ನಿರ್ಣಯವನ್ನು ತೆಗೆದುಕೊಳ್ಳಬೇಕು

---

---

ನಮ್ಮ ಆದಾಯವನ್ನು ನಮಗಿರುವ ಆಸ್ತಿಯೆಂದು ಪರಿಗಣಿಸದೆ ಅದನ್ನು



ಜವಬ್ದಾರಿಯಿಂದ ಉಪಯೋಗಿಸಬೇಕಾಗಿದೆ ಎಂದು ತಿಳಿಯಬೇಕು.ಇದನ್ನು ಪರಿಹಾರ ಮಾಡಲು ಇರುವ ಒಂದು ಮಾರ್ಗ ಎಂದರೆ ಮುಂಗಡಪತ್ರ (ಅಂದಾಜುಪಟ್ಟಿ) ವನ್ನು ಸಿದ್ದಪಡಿಸುವುದು. ಮುಂಗಡ ಪತ್ರವನ್ನು ಸಿದ್ದಪಡಿಸುವುದು ಅಭ್ಯಾಸದಿಂದ ಬರುವುದು ಮತ್ತು ಅದನ್ನು ಯಾವಾಗಲೂ ನಡೆಸುವುದರಿಂದ ಬರುವ ಫಲವಾಗಿದೆ. ಒಂದು ಉತ್ತಮವಾದ ಹಣಕಾಸಿನ ನಿರ್ವಹಣೆಯು ಶಿಸ್ತು ಮತ್ತು ಕ್ರಮಬದ್ದದಿಂದ ಬರುವುದಾಗಿದೆ. ( ಜ್ಞಾನೋಕ್ತಿಗಳು 14;15) ಒಂದು ವೇಳೆ ನಾವು ಯಶಸ್ವಿಯಾದ ಹಣಕಾಸಿನ ಪಾರುಪತ್ಯಗಾರಿಕೆಯನ್ನು ನಡೆಸಿದರೆ ಮಾತ್ರ ನಾವು ವ್ಯರ್ಥವಾದ ಹಣಕಾಸಿನ ತೊಂದರೆಗಳನ್ನು ತಪ್ಪಿಸಬಹುದು.

ಒಂದು ವೇಳೆ ನಿಮಗೆ ಹಣಕಾಸಿನ ನಿರ್ವಹಣೆಯಲ್ಲಿ ತೊಂದರೆ ಇದ್ದರೆ ಮುಂಗಡ ಪತ್ರವನ್ನು ಸಿದ್ದಪಡಿಸಿ ಕೊಳ್ಳಿರಿ ಅದೊಂದು ಕಷ್ಟವಾದ ಕೆಲಸವಾಗಬಾರದು, ಬದಲಿಗೆ ಅದು ಬಹಳ ಸರಳವಾಗಿ ಇರಬೇಕು. ನಿಮ್ಮ ಕೆಲವು ತಿಂಗಳುಗಳ ಸಂಬಳವನ್ನು ಕೂಡಿಸಿ ಅದರಲ್ಲಿ ನಿಮಗಿರುವ ಖರ್ಚುಗಳನ್ನು ಕಳೆದರೆ ಅದುವೇ ನಿಮ್ಮ ಮುಂಗಡ ಪತ್ರವಾಗಿದೆ. ಇದು ನಮಗಿರುವ ಹಣದಲ್ಲಿ ಬಾಳ್ವೆ ಮಾಡಲು ಸಹಾಯ ಮಾಡುತ್ತದೆ. ಇದರಿಂದ ಎಲ್ಲಾ ವಿಧದಲ್ಲೂ ಸಾಲದಿಂದ ದೂರವಿರಬಹುದು.

ಲೂಕ 14:27–30 ನ್ನು ಓದಿರಿ ಒಬ್ಬನು ಒಂದು ಮನೆಯನ್ನು ಕಟ್ಟಲು ಬೇಕಾದ ಹಣವನ್ನು ಲೆಕ್ಕ ಮಾಡಿಕೊಳ್ಳದೆ ಕಟ್ಟಡವನ್ನು ಪ್ರಾರಂಭಿಸುತ್ತಾನೆ ಕೊನೆಗೆ ಅದನ್ನು ಪೂರ್ತಿಗೊಳಿಸಲು ಸಾಧ್ಯವಾಗುವುದಿಲ್ಲ ಈ ಉದಾಹರಣೆಯನ್ನು ಯೇಸುವು ಶಿಷ್ಯತ್ವದ ಬೆಲೆಯ ಕುರಿತಾಗಿ ಹೇಳುತ್ತಾನೆ. ಇಲ್ಲಿರುವ ವಚನಗಳಿಂದ ಪಾರುಪತ್ಯಗಾರಿಕೆಯ ಕುರಿತಾಗಿ ನಾವು ಯಾವ ಪಾಠಗಳನ್ನು ಕಲಿಯಬಹುದು.

**ಪಾಠ 11 ಸಾಲ: ಪ್ರತಿದಿನದ ತೀರ್ಮಾನ ಮಾರ್ಚ್ 10–16**

**ಬುಧವಾರ ಮಾರ್ಚ್ 14**

## ಸಾಲಕ್ಕೆ ಬೇಡ ಎಂದು ಹೇಳುವುದು

ಧರ್ಮೋಪದೇಶಕಾಂಡ 28:12 ನ್ನು ಓದಿರಿ ಹೆಚ್ಚು ಸಾಲದಲ್ಲಿ ಸಿಲುಕುವುದರ ಕುರಿತು ಇಲ್ಲಿ ಏನು ಹೇಳಿದೆ? ಇಲ್ಲಿ ಯಾವ ನಿಯಮವು ಕಾರ್ಯರೂಪದಲ್ಲಿದೆ?

ಸಾದ್ಯವಾದಷ್ಟರ ಮಟ್ಟಿಗೆ ಸಾಲದಿಂದ ದೂರವಿರುವುದು ಸಾಮಾನ್ಯ ಜ್ಞಾನವಾಗಿದೆ. ಇತರರ ಸಾಲಕ್ಕೆ ಹೊಣೆಗಾರರಾಗುವುದನ್ನು ಕೂಡ ಸತ್ಯವೇದವು ನಿರಾಕರಿಸುತ್ತದೆ. (ಜ್ಞಾನೋಕ್ತಿಗಳು 17:18, 22:26). ಸಾಲವು ನಮ್ಮ ಹಣಕಾಸಿನ ಸ್ಥಿತಿಯಿಂದ ಬಲಹೀನರನ್ನಾಗಿ ಮಾಡಿ ಅದರ ಶರತ್ತುಗಳಿಗೆ ನಾವು ತಲೆಬಾಗಿ ಮತ್ತು ನಮ್ಮ ಭವಿಷ್ಯವನ್ನು ಅಂಧಕಾರಕ್ಕೆ ತಳ್ಳುತ್ತದೆ. ಕ್ರೈಸ್ತರಾಗಿ ನಾವು ಸಾಲವನ್ನು ನಿರಾಕರಿಸುವುದು ಮತ್ತು ಅದರ ಸಹಾಯವಿಲ್ಲದೆ ಇರುವುದು ಮೃದುವಾದ ಅಮೃತವಿದ್ದಂತೆ. ಸಾಲ ಅನೈತಿಕವಲ್ಲ ಆದರೆ ಅದು ನಮ್ಮ ಆತ್ಮೀಯ ಜೀವನವನ್ನು ಶಕ್ತಿಶಾಲಿಯಾಗಿಸುವುದಿಲ್ಲ.

ಹಣಕಾಸಿನ ವಿಚಾರದಲ್ಲಿ ನಾವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು ಇಲ್ಲವಾದರೆ ಸಾಲದ ದೊಡ್ಡ ಹೊರೆಯು ನಮ್ಮ ಮೇಲೆ ಬೀಳುತ್ತದೆ. ನಿಯಂತ್ರಣದಲ್ಲಿ ಇರಬೇಕು. ಕುಷ್ಠರೋಗವನ್ನು ತಡೆಯುವ ರೀತಿಯಲ್ಲಿ ಸಾಲವನ್ನು ತಡೆಯಿರಿ. **ಎಲೆನ್ ಜಿ ವೈಟ್ ಕೌನ್ಸಲ್ಸ್ ಆನ್ ಸ್ಟೀವರ್ಡ್ ಶಿಪ್ ಪುಟ 272.**

ಸಾಲಗಾರನು ಸಾಲಕೊಟ್ಟವನಿಗೆ ಸೇವಕ (ಜ್ಞಾನೋಕ್ತಿಗಳು 22:7) ಯಾಕೆಂದರೆ ಸಾಲವೂ ಹಣಕಾಸಿನ ವಸ್ತ್ರದಲ್ಲಿ ಸೇರಿಕೊಂಡಿರುವ ದಾರವಾಗಿದ್ದು ಅದು ಸಾಮಾನ್ಯ ಎಂದು ನಾವು ಭಾವಿಸುತ್ತೇವೆ. ಯಾಕೆಂದರೆ ಇಡೀ ದೇಶವೇ ಸಾಲದಲ್ಲಿದೆ; ಹಾಗಾದರೆ ವ್ಯಯಕ್ತಿಕವಾಗಿ ನಾವು ಏಕೆ ಸಾಲ ಮಾಡಬಾರದು. ಇದೊಂದು ತಪ್ಪಾದ ಕಲ್ಪನೆ.

ದೇವರ ಸಹಾಯದಿಂದ ನಿಮ್ಮ ಎಲ್ಲಾ ಸಾಲವನ್ನು ತೀರಿಸುವಿರಿ ಎಂದು ಗಂಭೀರವಾದ ಒಡಂಬಡಿಕೆಯನ್ನು ಮಾಡಿರಿ ಮತ್ತು ನೀವು ಗಂಜಿ ಕುಡಿದರೂ ಕೂಡ ಯಾರಿಗೂ ಸಾಲದ ಹೊರೆಯಲ್ಲಿ ಇರಬೇಡಿ. ನಿಮ್ಮ ಆಹಾರವನ್ನು ಸಿದ್ದ ಪಡಿಸಲು ಹೆಚ್ಚಿಗೆ ಕೆಲವು ರೂಪಾಯಿಗಳನ್ನು ಚೆಲ್ಲುವುದು ಬಹಳ ಸುಲಭ. ನಿಮ್ಮ ಸ್ವಲ್ಪ ಹಣವನ್ನು ಜಾಗ್ರತೆಯಾಗಿ ನೋಡಿಕೊಳ್ಳಿರಿ ಯಾಕೆಂದರೆ ಅದು ನಿಮ್ಮನ್ನು ನೋಡಿಕೊಳ್ಳುತ್ತದೆ. ಸ್ವಲ್ಪ ಸ್ವಲ್ಪವಾಗಿ ನಾವು ಮಾಡುವ ಖರ್ಚು ದೊಡ್ಡದಾಗಿ ಸಾವಿರಾರು ರೂಪಾಯಿಗಳಾಗುತ್ತದೆ. ನೀವು ಸಾಲದಲ್ಲಿರುವಾಗ ನಾನತ್ವವನ್ನು ಬಿಟ್ಟುಕೊಡಿ. ಬಡಾಯಿ



ಕೊಚ್ಚಿಕೊಳ್ಳಬೇಡಿರಿ, ನಿರುತ್ಸಾಹ ಹೊಂದಬೇಡಿ, ಅಥವಾ ಹಿಂದಕ್ಕೆ ನೋಡಬೇಡಿ. ನಿಮ್ಮ ನಾಲಿಗೆಯ ರುಚಿಯನ್ನು ಬಿಟ್ಟುಬಿಡಿ, ಬಾಯಿ ಚಪಲದಿಂದ ದೂರವಿರಿ, ನಿಮ್ಮ ಚಿಲ್ಲರೆ ಹಣವನ್ನು ಉಳಿಸಿ ಸಾಲವನ್ನು ತೀರಿಸಿ. ಅದನ್ನು ಎಷ್ಟು ಬೇಗ ಸಾದ್ಯವೋ ಅಷ್ಟು ಬೇಗ ತೀರಿಸಿ. ನೀವು ಸ್ವತಂತ್ರರಾಗಿ ನಿಲ್ಲುವ ತನಕ ಯಾರಿಗೂ ಏನೂ ಕೊಡುವ ಸ್ಥಿತಿಯಲ್ಲಿ ನಿಂತಾಗ ನೀವು ಶ್ರೇಷ್ಠವಾದ ಜಯವನ್ನು ಹೊಂದುವಿರಿ. **ಎಲೆನ್ ಜಿ ವೈಟ್ ಕೌನ್ಸಲ್ಸ್ ಆನ್ ಸ್ಟೀವರ್ಡ್ ಶಿಪ್ ಪುಟ 257.** ಸಾಲವೂ ಅಸ್ಥಿರವಾದ ಬುನಾದಿಯಾಗಿದ್ದು ಅದರ ಮೇಲೆ ಕ್ರೈಸ್ತರು ನಿಲ್ಲಲು ಅದು ಯೋಗ್ಯವದದ್ದಲ್ಲ. ಅದು ನಮ್ಮ ಆತ್ಮೀಯ ಜೀವನಕ್ಕೆ ತೊಂದರೆಯನ್ನು ತರುತ್ತದೆ ಮತ್ತು ದೇವರ ಕೆಲಸಕ್ಕೆ ಹಣವನ್ನು ಒದಗಿಸಲು ನಮಗೆ ಅಡ್ಡಿಯಾಗುತ್ತದೆ.

ಬೇಡವಾಗಿರುವ ಸಾಲದಿಂದ ನಿಮ್ಮನ್ನು ನೀವು ತಪ್ಪಿಸಿಕೊಳ್ಳಲು ನೀವು ತೆಗೆದುಕೊಳ್ಳಬೇಕಾದ ಕೆಲವು ನಿರ್ಣಯಗಳು ಯಾವುವು? ಸಾಲದಿಂದ ಮುಕ್ತಿಯಾಗಿರಲು ನೀವು ದೂರವಿರಬೇಕಾದ ಕೆಲವು ಅಭ್ಯಾಸಗಳು ಯಾವುವು?

**ಪಾಠ 11 ಸಾಲ: ಪ್ರತಿದಿನದ ತೀರ್ಮಾನ ಮಾರ್ಚ್ 10–16**

**ಗುರುವಾರ ಮಾರ್ಚ್ 15**

## ಉಳಿತಾಯ ಮತ್ತು ಹೂಡಿಕೆ

ಇರುವೆಗಳು ಚಳಿಗಾಲಕ್ಕಾಗಿ ತಮ್ಮ ಆಹಾರವನ್ನು ಉಳಿಸಿಕೊಳ್ಳುತ್ತವೆ (ಜ್ಞಾನೋಕ್ತಿಗಳು 6:6–8) ನಾವು ಅವುಗಳ ಹಾದಿಯನ್ನು ಗಮನಿಸಿಕೊಂಡು ಒಂದು ವಿಶೇಷವಾದ ಯೋಜನೆಗಾಗಿ ಹಣವನ್ನು ಉಳಿತಾಯ ಮಾಡಬಹುದು. ಉಳಿತಾಯದ ಮುಖ್ಯವಾದ ವಿಷಯವೆಂದರೆ ನಮ್ಮ ಸಂಪಾದನೆಯನ್ನು ವ್ಯರ್ಥವಾಗಿ ಉಪಯೋಗಿಸದೆ ಅದನ್ನು ಒಂದು ಉದ್ದೇಶಕ್ಕಾಗಿ ಕಾಪಾಡುವುದಾಗಿದೆ. ಹಣವನ್ನು ನಿರ್ವಹಣೆಗೆ ವಿವೇಕದ, ಮುಂಗಡಪತ್ರದ, ಮತ್ತು ಶಿಸ್ತಿನ ಅವಶ್ಯಕತೆಯಿದೆ. ನಾವು ನಮಗಾಗಿ ಉಳಿಸಿದರೆ ದೇವರು ನಮಗೆ ನೀಡಿರುವ ಸಂಪನ್ಮೂಲದ ಮೇಲೆ ಸರಿಯಾದ ಪಾರುಪತ್ಯಗಾರಿಕೆಯನ್ನು ನಡೆಸದೆ ಅದನ್ನು ಕಳ್ಳಸಾಗಣೆ ಮಾಡುವುದಾಗಿದೆ.

'ಹಣವನ್ನು ವ್ಯರ್ಥವಾಗಿ ಉಪಯೋಗಿಸುವುದು ಎರಡರಷ್ಟು ನಷ್ಟ ಅನುಭವಿಸಿದಂತೆ.

ಅದನ್ನು ಖರ್ಚು ಮಾಡುವುದಲ್ಲದೆ ಅದನ್ನು ಸಂಪಾದಿಸುವ ಸಾಮರ್ಥ್ಯವನ್ನು ಕೂಡ ಕಳೆದುಕೊಳ್ಳುತ್ತೇವೆ. ಒಂದು ವೇಳೆ ನಾವು ಅದನ್ನು ಉಳಿತಾಯ ಮಾಡಿದ್ದರೆ ಈ ಲೋಕದಲ್ಲಿ ದ್ವಿಗುಣವಾಗುತ್ತಿತ್ತು ಅಥವಾ ಇತರರಿಗೆ ಕೊಡುವುದರ ಮೂಲಕ ಪರಲೋಕದಲ್ಲಿ ಸೇರಿಸಿದ ಗಂಟಾಗುತ್ತಿತ್ತು. ಉಳಿತಾಯ ಒಂದು ಶಿಸ್ತಿನ ಜೀವನವಾಗಿದ್ದು ಅದು ಹಣದ ಮೇಲೆ ನಮಗೆ ಅಧಿಕಾರವನ್ನು ನೀಡುತ್ತದೆ. ಹಣವು ನಮ್ಮ ಮನಸ್ಸುಗಳನ್ನು ತಮ್ಮ ಇಷ್ಟದ ಕಡೆಗೆ ಸೆಳೆಯುವ ಬದಲು ನಾವು ಅದನ್ನು ನಮ್ಮ ಅಧೀನಕ್ಕೆ ಒಳಪಡಿಸಬಹುದು.

ಜ್ಞಾನೋಕ್ತಿಗಳು 13:11, ಜ್ಞಾನೋಕ್ತಿಗಳು 21:5 ಮತ್ತು ಜ್ಞಾನೋಕ್ತಿಗಳು 13:18 ಹಣಕಾಸಿನ ವಿಚಾರದಲ್ಲಿ ನಾವು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಈ ವಚನಗಳು ಏನು ಹೇಳುತ್ತವೆ?

________________________________________

________________________________________

ದೇವರ ಅಸ್ತಿಗಳನ್ನು ನಿರ್ವಹಿಸುವಾಗ ಪಾರುಪತ್ಯಗಾರರು ಕುಟುಂಬದ ಅವಶ್ಯಕತೆಗಳಿಗಾಗಿ ಉಳಿತಾಯ ಮಾಡಿ ಮತ್ತು ಪರಲೋಕದಲ್ಲಿ ಅದನ್ನು ಹೂಡಿಕೆ ಮಾಡುತ್ತಾರೆ. ಒಬ್ಬನು ಎಷ್ಟು ಹೊಂದಿದ್ದಾನೆ ಎಂಬುದು ಮುಖ್ಯವಲ್ಲ, ಅದನ್ನು ನಿರ್ವಹಿಸಲು ಸತ್ಯವೇದ ಅಮೋದಿತವಾದ ಯೋಜನೆಯನ್ನು ಹೊಂದಿರುವುದು ಬಹಳ ಮುಖ್ಯವಾಗಿದೆ. ಕುಟುಂಬಕ್ಕಾಗಿ ಉಳಿತಾಯ ಮಾಡುವುದು ವಿವೇಕದ ಕೆಲಸವಾಗಿದೆ. ನಿಮ್ಮ ಅವಶ್ಯಕತೆಗಳ ಅನುಸಾರವಾಗಿ ಕೆಲಸ ಮಾಡುವುದು (ಜ್ಞಾನೋಕ್ತಿಗಳು 24:27) ಮತ್ತು ಇತರರಿಂದ ಗುಣಮಟ್ಟದ ಸಲಹೆಯನ್ನು ಪಡೆಯುವುದು (ಜ್ಞಾನೋಕ್ತಿಗಳು 15:22) ಈ ಎರಡೂ ಕೂಡ ಇದರಲ್ಲಿ ಯಶಸ್ವಿಯಾದ ಸಲಕರಣೆಗಳು. ನಿಮ್ಮ ಅವಶ್ಯಕತೆಗಳನ್ನು ಪೂರೈಸಿ ಮತ್ತು ನಿಮ್ಮ ಸಂಪತ್ತು ವೃದ್ದಿಯಾದಾಗ ನಾವು ದೇವರು 'ನಿಮಗೆ ಇಷ್ಟು ಭಾಗ್ಯವನ್ನು ಸಂಪಾದಿಸುವದಕ್ಕೆ ಸಾಮರ್ಥ್ಯವನ್ನು ಕೊಟ್ಟವನೆಂದು ಜ್ಞಾಪಕ ಪಡಿಸಿಕೊಳ್ಳಿರಿ.' ಧರ್ಮೋಪದೇಶಕಾಂಡ 8:18).

ದೇವರ ಪಾರುಪತ್ಯಗಾರನಿಗೆ ದೊರೆತಿರುವ ಬಹಳ ಮುಖ್ಯವಾದ ಹೂಡಿಕೆ ಎಂದರೆ 'ಪರಲೋಕದಲ್ಲಿ ಹೂಡಿಕೆ ಮಾಡುವುದು' (ಮತ್ತಾಯ 13:44), ಅಲ್ಲಿ ಯಾವುದೇ ಮಸಿತವಿಲ್ಲ, ಅಪಾಯವಿಲ್ಲ, ಕಳ್ಳರು ಇಲ್ಲ, ಅಥವಾ ಮಾರುಕಟ್ಟೆಯ ಧಿಡೀರ್ ಕುಸಿತವಿಲ್ಲ. ಇದು ನಮ್ಮ ಹಣವನ್ನು ಖಾತೆಯನ್ನು ಹೊಂದುವುದು ಮತ್ತು ದಶಾಂಶವನ್ನು ಮತ್ತು ಕಾಣಿಕೆಗಳನ್ನು ಕೊಡುವುದು ನಿಕ್ಷೇಪಗಳನ್ನು ಹೊಂದುವ ಹಾಗೆ. ನಾವು ಈ ಲೋಕದ ಮತ್ತು ನಮ್ಮ ಸ್ವಂತ ವಸ್ತುಗಳನ್ನು ಕಾಪಾಡಿಕೊಳ್ಳಬೇಕು. ಅದಕ್ಕಾಗಿ ನಾವು ಕಟ್ಟಬೇಕಾದದ್ದನ್ನು ಕಟ್ಟಬೇಕು, ಇದನ್ನು ಮಾಡುತ್ತಾ ನಮ್ಮ ದೃಷ್ಟಿಯನ್ನು ಪರಲೋಕದ ಮೇಲೆ ಇಡಬೇಕು.



2 ಕೊರಿಂಥ4:18ನ್ನು ಓದಿರಿ ಈ ಸತ್ಯವನ್ನು ನಮ್ಮ ಮುಂದೆ ಇಟ್ಟುಕೊಂಡು ಮತ್ತು ಜವಾಬ್ದಾರಿಯುತವಾದ ಪಾರುಪತ್ಯಗಾರರಾಗಿ ಹೇಗೆ ಜೀವನ ಮಾಡುವುದು?

**ಪಾಠ 11 ಸಾಲ: ಪ್ರತಿದಿನದ ತೀರ್ಮಾನ ಮಾರ್ಚ್ 10–16**

**ಶುಕ್ರವಾರ ಮಾರ್ಚ್ 16**

## ಹೆಚ್ಚಿನ ಚಿಂತನೆ

ಪ್ರತಿಯೊಂದು ಸ್ವಾಭಾವಿಕವಾದ ಸಾಮರ್ಥ್ಯ, ಕೌಶಲ್ಯ ಅಥವಾ ಬಹುಮಾನ ದೇವರಿಂದ ಬರುವುದಾಗಿದೆ, ನಾವು ಅವುಗಳನ್ನು ಅನುವಂಶಿಕವಾಗಿ ಪಡೆದುಕೊಂಡು ಹುಟ್ಟಿದರೂ ಅಥವಾ ಅದಕ್ಕೆ ಬೇಕಾದ ತರಬೇತಿಯನ್ನು ಪಡೆದುಕೊಂಡಿದ್ದರೂ ಕೂಡ ಅಥವಾ ಎರಡೂ ಕೂಡ ಇರಬಹುದು. ಅದರೆ ಮುಖ್ಯವಾದ ವಿಷಯವೆಂದರೆ ನಮ್ಮ ಸಾಮರ್ಥ್ಯಗಳನ್ನು ನಾವು ಏನು ಮಾಡುತ್ತೇವೆ. ದೇವರು ನಮಗೆ ನೀಡಿರುವ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಬಯಸುತ್ತಾನೆ. ಇವುಗಳನ್ನು ವಿದ್ಯಾಭ್ಯಾಸ ಮತ್ತು ಪ್ರಾಯೋಗಿಕವಾಗಿ ಮೆರುಗುಗೊಳಿಸಿಕೊಳ್ಳಬಹುದು. (ಪ್ರಸಂಗಿ 10:10).

'ಬೆಚಲೇಲನು ಸಕಲವಿಧವಾದ ಶೃಂಗಾರವಾದ ಕೆಲಸವನ್ನು ಮಾಡುವದಕ್ಕೂ ದೇವರಾತ್ಮನಿಂದ ತುಂಬಿಸಲ್ಪಟ್ಟನು.(ವಿಮೋಚನೆಕಾಂಡ 35:31) ಅವನು ಮತ್ತು ಒಹೋಲಿಯಾಬಾನಿಗೆ (ವಿಮೋಚನೆಕಾಂಡ 35:34) ಬೇರೆಯವರಿಗೆ ಕಲಿಸುವ ಸಾಮರ್ಥ್ಯವನ್ನು ನೀಡಲಾಯಿತು.

ಈ ಲೋಕದಲ್ಲಿ ಜೀವಿಸುವಾಗ ಸಾಲವನ್ನು ದೂರಮಾಡಲು ಮತ್ತು ಉತ್ತಮ

ಪಾರುಪತ್ಯಗಾರರಾಗುವುದಕ್ಕೆ ಕಲಿಯಬಹುದು. ಓದುವುದರ ಮೂಲಕ, ವಿಚಾರ ಸಂಕೀರ್ಣಗಳ ಮೂಲಕ, ವಿದ್ಯಾಭ್ಯಾಸ, (ಯಾವುದು ಸಾದ್ಯವೋ ಅದು) ದ ಮೂಲಕ ನಮ್ಮ ಕೌಶಲ್ಯವನ್ನು ಮೆರುಗುಗೊಳಿಸಲು ಪ್ರಯತ್ನಪಡಬೇಕು ಮತ್ತು ನಾವು ಏನು ಕಲಿತಿದ್ದೆವೋ ಅದನ್ನು ಅಭ್ಯಾಸ ಮಾಡಬೇಕು. ನಮ್ಮ ಕೌಶಲ್ಯಗಳನ್ನು ವೃದ್ದಿಗೊಳಿಸಿದಾಗ ನಾವು ಒಳ್ಳೆಯ ಪಾರುಪತ್ಯಗಾರರಾಗಿ ದೇವರಿಗೆ ನಮ್ಮ ಶ್ರೇಷ್ಠವಾದ ಸೇವೆಯನ್ನು ಸಲ್ಲಿಸಬಹುದು.

ತಲಾಂತುಗಳ ಸಾಮ್ಯದಲ್ಲಿ ಪ್ರತಿಯೊಬ್ಬ ಸೇವಕನು ಕೂಡ ತಲಾಂತುಗಳನ್ನು ಹೊಂದಿದ್ದನು. 'ಅವನ ಸಾಮರ್ಥ್ಯಕ್ಕೆ ತಕ್ಕಂತೆ' (ಮತ್ತಾಯ 25:25) ಇಬ್ಬರೂ ಸೇವಕರು ತಮ್ಮ ಮೊತ್ತವನ್ನು ದ್ವಿಗುಣಗೊಳಿಸಿದರು. ಮೂರನೆಯವನು ತನ್ನ ತಲಾಂತನ್ನು ಭೂಮಿಯಲ್ಲಿ ಅಡಗಿಸಿಟ್ಟನು. ನಮಗಿರುವುದನ್ನು ನಾವು ಯಾವಾಗಲೂ ಅಭಿವೃದ್ಧಿಪಡಿಸಬೇಕು. ತಲಾಂತನ್ನು ಅಡಗಿಸಿಡುವುದು ಯಾವುದೇ ರೀತಿಯಲ್ಲಿ ಕೌಶಲ್ಯವನ್ನು ತೋರಿಸುವುದಾಗಿರಲಿಲ್ಲ. ಹಣವನ್ನು ನಿರ್ವಹಿಸುವುದು, ಸಾಲದಿಂದ ಹೊರಬರುವುದು, ಶಿಸ್ತನ್ನು ಕಲಿಯುವುದು, ಮತ್ತು ಪ್ರಾಯೋಗಿಕವಾಗಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ದೇವರಿಂದ ಬರುವ ಬಹುಮಾನಗಳು. ಒಂದು ವಿಷಯದಲ್ಲಿ ಶ್ರೇಷ್ಟತೆಯನ್ನು ಸಾಧಿಸುವುದು ಮತ್ತು ಅದನ್ನು ಮತ್ತೆ ಮತ್ತೆ ಸಾಧಿಸುವುದು ಬಹಳ ಮುಖ್ಯವಾಗಿದೆ.

'ಸತ್ಯವೇದದ ಪಾಠಗಳನ್ನು ಪ್ರತಿದಿನದ ಜೀವನಕ್ಕೆ ಅಳವಡಿಸಿಕೊಂಡಾಗ ಅವು ನಮ್ಮ ಸ್ವಭಾವದ ಮೇಲೆ ಆಳವಾದ ಮತ್ತು ಧೀರ್ಘವಾದ ಪ್ರಭಾವವನ್ನು ಬೀರುತ್ತವೆ. ಈ ಪಾಠಗಳನ್ನು ತಿಮೊಥಿಯು ಕಲಿತನು ಮತ್ತು ಅಭ್ಯಾಸಮಾಡಿದನು. ಅವನಿಗೆ ಶ್ರೇಷ್ಠವಾದ ಯಾವುದೇ ತಲಾಂತುಗಳು ಇರಲಿಲ್ಲ ದೇವರು ಅವನಿಗೆ ನೀಡಿದ ತಲಾಂತುಗಳನ್ನು ದೇವರ ಸೇವೆಯಲ್ಲಿ ಉಪಯೋಗಿಸಿದನು. **ಎಲೆನ್ ಜಿ ವೈಟ್ ದಿ ಆಕ್ಟ್ಸ್ ಆಫ್ ದಿ ಅಪೋಸ್ಟ್ಲೆಸ್ ಪುಟ 205**.



ಚರ್ಚಿಸಬೇಕಾದ ಪ್ರಶ್ನೆಗಳು

1. ಕ್ರೈಸ್ತರಿಗೆ ಸ್ವಯಂ ನಿಯಂತ್ರಣ ಬಹಳ ಮುಖ್ಯವಾಗಿದ್ದರೂ ಕೂಡ ಸ್ವಯಂ ನಿಯಂತ್ರಣವಿಲ್ಲದೆ ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿ ಮತ್ತು ಅಪಾಯಕ್ಕೆ ಹೇಗೆ ಸಿಲುಕಬಹುದು ಇಂತಹ ಅಪಾಯದಲ್ಲಿರುವವರಿಗೆ ಸಭೆಯಾಗಿ ನಾವು ಏನು ಮಾಡಬಹುದು?

2. ರೋಮ 13:7,8, ನ್ನು ಓದಿರಿ, ಈ ಮಾತುಗಳನ್ನು ನಮ್ಮ ಅನುದಿನದ ಜೀವನಕ್ಕೆ ಹೇಗೆ ಅಳವಡಿಸಿಕೊಳ್ಳುವುದು ಮತ್ತು ಇತರರೊಂದಿಗೆ ನಾವು ಮಾಡುವ ಎಲ್ಲಾ ವ್ಯವಹಾರಗಳಲ್ಲಿ ಇದನ್ನು ಹೇಗೆ ಪಾಲಿಸುವುದು?

3. ಯೇಸುವು ಶೀಘ್ರವಾಗಿ ಬರುತ್ತಿರುವುದರಿಂದ ಸಾಲದಲ್ಲಿ ಸಿಲುಕುವುದರ ಕುರಿತಾಗಿ ಹೆಚ್ಚು ಆಲೋಚಿಸಬಾರದು ಎಂದು ಕೆಲವರು ವಾದಿಸುತ್ತಾರೆ. ಇಂತಹ ವಾದಕ್ಕೆ ನೀವು ಹೇಗೆ ಉತ್ತರ ನೀಡುವಿರಿ?